ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ಕ್ರೈಸ್ ಸಂಸ್ಥೆಯ ನೌಕರರಿಗೆ ವಿವಿಧ ಸೌಲಭ್ಯಗಳನ್ನು ನೀಡುವ ಬಗ್ಗೆ

ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ) -

1012 (1165) ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಸಮಾಜ ಕಲ್ಯಾಣ ಇಲಾಖೆಯ ಅಧೀನದ ಕ್ರೈಸ್ ಸಂಸ್ಥೆಯ ವಸತಿ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಖಾಯಂ ನೌಕರರಿಗೆ ಮರಣ ಉಪದಾನ (ಡಿ.ಸಿ.ಆರ್.ಜಿ) ಸೌಲಭ್ಯ ನೀಡದಿರುವುದಕ್ಕೆ ಕಾರಣಗಳೇನು;

(ಆ) ಕ್ರೈಸ್ ಸಂಸ್ಥೆಯ ವಸತಿ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಖಾಯಂ ನೌಕರರಿಗೆ ಇ.ಜಿ.ಐ.ಎಸ್ (ಎಂಪ್ಲಾಯ್ ಗ್ರಾಚ್ಯುಟಿ ಇನ್ಸ್ಯೂರೆನ್ಸ್ ಸ್ಕೀಮ್) ಮೊತ್ತ ನೀಡಲಾಗುತ್ತಿದೆಯೇ; ಈ ಮೊತ್ತದ ಪ್ರಮಾಣ ಎಷ್ಟು; ಇಂದಿನವರೆವಿಗೂ ಎಷ್ಟು ಮೃತ ನೌಕರರಿಗೆ ಈ ಸೌಲಭ್ಯ ನೀಡಲಾಗಿದೆ;

(ಇ) ಕ್ರೈಸ್ ಸಂಸ್ಥೆಯ ವಸತಿ ಶಾಲೆಗಳಲ್ಲಿ ಸೇವೆ ಸಲ್ಲಿಸಿ ಇಲ್ಲಿಯವರೆಗೂ ನಿಧನರಾದ ನೌಕರರ ಸಂಖ್ಯೆ ಎಷ್ಟು; ನಿಧನರಾದ ನೌಕರರ ಕುಟುಂಬಕ್ಕೆ ಸರ್ಕಾರ/ಕ್ರೈಸ್ ಸಂಸ್ಥೆ ನೀಡಿರುವ ಪರಿಹಾರ ಮೊತ್ತ ಎಷ್ಟು ಹಾಗೂ ಫಲಾನುಭವಿಗಳ ಸಂಖ್ಯೆ ಎಷ್ಟು ಮತ್ತು ಯಾರು ಯಾರು; ಅನುಕಂಪದ ಆಧಾರಿತ ಸೇವೆಗೆ ಸೇರಿದವರ ವಿವರಗಳನ್ನು ನೀಡುವುದು; ನೀಡದೇ ಇದ್ದಲ್ಲಿ, ಕಾರಣಗಳೇನು;

(ಈ) ಕ್ರೈಸ್ ಸಂಸ್ಥೆಯ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕ/ಬೋಧಕೇತರರಿಗೆ ಜ್ಯೋತಿ ಸಂಜೀವಿನಿ ಯೋಜನೆ ಹಾಗೂ ನಗದು ರಹಿತ ಸೌಲಭ್ಯಗಳನ್ನು ನೀಡಲಾಗುತ್ತಿದೆಯೇ; ಮಾಹಿತಿ ಇಲ್ಲದಿದ್ದಲ್ಲಿ, ಕಾರಣವೇನು? (ಸಂಪೂರ್ಣ ಮಾಹಿತಿಯೊಂದಿಗೆ ವಿವರ ನೀಡುವುದು)